ರಗಳೆ ಮಾಡಿ ಮತ್ತೆ ಇಲ್ಲಿಗೆ ಅಟ್ಟುತ್ತಾರೆ. 'ಅತ್ತ ದರಿ, ಇತ್ತ ಪುಲಿ' ಎನ್ನುವಂಥ ಅವಸ್ಥೆಯಲ್ಲಿ ಹುಡುಗಿ ಕುಗ್ಗಿಹೋದಳು. 'ದೊಡ್ಡ ಬಾವ ಹೀಗೆ' ಎಂದು ಯಾರ ಹತ್ತಿರವೂ ಬಾಯ್ಬಿಡುವಂತಿಲ್ಲ. ಬಾಯ್ಬಿಟ್ಟರೆ ತನ್ನ ಕುತ್ತಿಗೆಗೇ ಸುತ್ತಿಕೊಳ್ಳುತ್ತದೆ ಎಂದು ಅವಳಿಗೆ ಗೊತ್ತು. 'ಗಂಡಿನ ಸುಖ ಬೇಕು ಎಂದು ಅವಳೇ ಹಿಂದೆ ಬಿದ್ದಿದ್ದು' ಅಂದುಬಿಟ್ಟರೆ ಮುಗಿಯಿತಲ್ಲ ಕತೆ? ಜನ ಗಂಡಸರನ್ನು ನಂಬುವಷ್ಟು ಹೆಂಗಸರ ಮಾತಿಗೆ ಬೆಲೆ ಕೊಡುವುದಿಲ್ಲ. ನಂಬುವಂತೆ ಹೇಳುವ ಭಂಡತನ ಕೆಲವರು ಸಿದ್ಧಿಸಿಕೊಂಡುಬಿಟ್ಟಿರುತ್ತಾರೆ.

'ಬಿಡು ಗಾಡಿ...' ಎಂದು ಅಲ್ಲಿಂದ ದೂಡಿದರೆ ಎಲ್ಲಿಗೆ ಹೋಗಬೇಕು? ಎಷ್ಟೇ ಕಷ್ಟ ಬಂದರೂ ಕೆರೆ, ಬಾವಿ ಎನ್ನುವಷ್ಟು ಧೈರ್ಯ ಬಂದಿರಲಿಲ್ಲ. ಹೇಗೋ ಕಾಲ ಹಾಕುತ್ತಿದ್ದಳು ದೇವಕಿ. ಹೀಗಿರುವಾಗ ಮತ್ತೊಂದು ಅನರ್ಥ ನಡೆದುಹೋಯ್ತು. ಗಂಡ ಎನ್ನುವ ವಸ್ತು ಶಾಶ್ವತವಾಗಿ ಕಳೆದುಹೋಯ್ತು. 'ತೋಟಕ್ಕೆ ಹೋದಾಗ ಹಾವು ಕಚ್ಚಿದ್ದು' ಎನ್ನುವ ಹೇಳಿಕೆ. ಬಾವನೇ ಈ ಕೆಲಸ ಮಾಡಿರಬಹುದೆಂದು ದೇವಕಿಗೆ ಅನುಮಾನ. ವಿಷ ಕೈಗೆ ಕೊಟ್ಟು 'ಕುಡಿ' ಅಂದರೂ ಕಣ್ಣು ಮುಚ್ಚಿ ಕುಡಿಯುವಷ್ಟು ಅಮಾಯಕ ತನ್ನ ಗಂಡ. ಮೂರು ವರ್ಷದ ಮಕ್ಕಳಿಗಿರುವಷ್ಟು ಕೂಡಾ ಬುದ್ಧಿ ಬೆಳೆದಿಲ್ಲ. ಅಂತೂ ಮೈಯೆಲ್ಲಾ ನೀಲಿಗಟ್ಟಿ ಸತ್ತಿದ್ದು ಹೌದು. 'ಮನೆಯಿಡೀ ಕೇಳುವಷ್ಟು ಜೋರಾಗಿ ಕಿರುಚಿಬಿಡ್ತೀನಿ' ಎಂದು ಬಾವನಿಗೆ ತೋರುಬೆರಳು ತೋರಿಸುತ್ತಾ ಧಮಕಿ ಹಾಕಿದ್ದು ದುಬಾರಿಯಾಯ್ತಾ? ಯಾರನ್ನು ಕೇಳಬೇಕು? ಕಾನೂನಿನ ಕುಣಿಕೆಗೆ ಸಿಕ್ಕದೆ ಜಾರಿಕೊಳ್ಳುವುದು ಹಳ್ಳಿಕೊಂಪೆಯಲ್ಲಿ ಸಲೀಸಾದ್ದರಿಂದ ಏನೇನು ನಡೆಯುತ್ತಿತ್ತು ಎಂದು ಹೇಳುವುದೇ ಕಷ್ಟ. ಇನ್ನು ಕೈಗೆ ಸಿಕ್ಕದೆ ಎಲ್ಲಿಗೆ ಹೋಗುತ್ತಾಳೆ? ಎಂದು ಬಾವನಿಗೆ ಪರಮಾನ್ನ ಸುರಿದಷ್ಟು ಖುಷಿಯಾಗಿರಬಹುದು. ಅಥವಾ ಪಾಪಪ್ರಜ್ಞೆಯಂತಾದ್ದೇನೋ ಕಾಡಿ ಗೊತ್ತಿಲ್ಲಪ್ಪಾ ದೇವಕಿಗೆ. ಸತ್ಯ ಗೊತ್ತಿರುವುದು ಮೇಲಿರುವವನೊಬ್ಬನಿಗೆ ಮಾತ್ರ. ದೇವಕಿ ತನ್ನ ಬಿಡಾರವನ್ನು ಅತ್ತೆಯ ಕೋಣೆಗೆ ವರ್ಗಾಯಿಸಿಕೊಂಡಳು. ಗಂಡನನ್ನು ಕಳೆದುಕೊಂಡು ಒಬ್ಬಂಟಿಯಾಗಿ ಮಲಗುತ್ತಿದ್ದ ಅತ್ತೆಗೆ ಸೊಸೆ ಜೊತೆ. ವಿಧಿಯಾಟಕ್ಕೆ ಏನೆನ್ನಬೇಕೋ ಗೊತ್ತಿಲ್ಲ. ಕಾಮದೇವನನ್ನು ಗೆಲ್ಲುವುದು ಸುಲಭದ ಮಾತಲ್ಲ. ಹಿಂದೆ ಬಿದ್ದ ಬಾವನನ್ನು ತಿರಸ್ಕರಿಸಿ ಅವರ ಅವಕೃಪೆಗೆ ತುತ್ತಾಗಿದ್ದ ದೇವಕಿ ಮನೆಯಾಚೆಯ ಯಾವುದೋ ಆಕರ್ಷಣೆಗೆ ಮನಸೋತಳು. 'ಯಾರು?' ಎಂದು ಎಂಥಾ ಆಪ್ತರಿಗೂ ಅವಳು ಗುಟ್ಟು ಬಿಟ್ಟು ಕೊಡಲಿಲ್ಲ. 'ಹೆಸರು ಹೇಳಿದ್ರೆ ಸುಮ್ನೆ ಬಿಟ್ಟಿಡ್ತಾರಾ? ಹುಟ್ಲಿಲ್ಲ ಅನ್ನಿಸಿಬಿಡ್ತಾರೆ. ಮನೆಯೋರಂತೂ ಖಂಡಿತಾ ಅಲ್ಲ' ಅನ್ನುತ್ತಿದ್ದಳಂತೆ ದೇವಕಿ.

ಸೀತಾಲಕ್ಷ್ಮಿಯ ಅಮ್ಮ ಅಂದರೆ ಅವಳಿಗೆ ದೇವರ ಸಮಾನ. ಯಾರೊಂದಿಗೆ, ಯಾವಾಗಿನಿಂದ, ಹೇಗೆ ಸಂಪರ್ಕ ಸಾಧಿಸಿದ್ದಳೋ ದೇವಕಿ, ಪ್ರಕೃತಿ ತನ್ನ ಪರಿಣಾಮ ತೋರಿಸಿಬಿಟ್ಟಿತು. ಹೊಟ್ಟೆಯೊಳಗಿನ ಪಿಂಡಕ್ಕೆ ತಾನು ಅಕ್ರಮ ಸಂತಾನ, ಸಾಧ್ಯವಾದಷ್ಟು ದಿನ ಗುಟ್ಟಾಗಿದ್ದು ತನ್ನಮ್ಮನ ಮರ್ಯಾದೆ ಕಾಪಾಡಬೇಕು ಎನ್ನುವ ಯಾವ ತಿಳಿವಳಿಕೆ ಇದೆ? ವಾಂತಿಭ್ರಾಂತಿಗಳಿಂದ ಕಂಗಾಲಾದಳು ದೇವಕಿ. ಮನೆಯವರಿಗೆ ಸತ್ಯಸಂಗತಿ ಗೊತ್ತಾಯ್ತು. 'ಕತ್ತರಿಸಿ ಬಿಸಾಕ್ತೀನಿ' ಎಂದು ಬಾವ ವೀರಭದ್ರಾವತಾರ ತಾಳಿದ್ದರಂತೆ.

'ಮಾರಾಯ್ನೇ, ಜೈಲಿಗೆ ಹೋಗೋ ಕೆಲಸ ಮಾಡ್ಬೇಡ. ಮನೆ ಮರ್ಯಾದೆ ಕಳೀಬೇಡ. ಈಗಾಗಿರೋದೇ ಸಾಕು...' ಎಂದು ದೇವಕಿಯ ಅತ್ತೆ ಮಗನ ಕಾಲು ಹಿಡಿದುಕೊಂಡರಂತೆ. ಯಾರಿಗೂ ಗೊತ್ತಾಗದಂತೆ ನಡೆದ ಖೂನಿಯನ್ನಾದರೆ ಮುಚ್ಚಿ ಹಾಕಬಹುದು. ಎಲ್ಲರೆದುರು ನಡೆದುಬಿಟ್ಟರೆ? ಸುದ್ದಿ ಆಗಲೇ ಢಾಣಾಢಂಗುರ ಆಗಿತ್ತು. ಒಂದರ್ಥದಲ್ಲಿ ಒಳ್ಳೆಯದೇ ಆಯಿತು ಅಂದುಕೊಂಡರೇನೋ ಬಾವದಿಕ್ಕಳು. ಅಕ್ರಮ ಸಂತಾನಕ್ಕೆ ಆಸ್ತಿಯಲ್ಲಿ ಪಾಲು ಕೊಡಬೇಕಾದ್ದಿಲ್ಲ ಎಂದು ಅವರ ನಂಬುಗೆ. 'ಮನೆ ಬಿಟ್ಟು ನಡಿ' ಅಂದರು. ದೇವಕಿ ಇದಕ್ಕೆ ಸಿದ್ಧಳಾಗಿದ್ದಳು. ಉಟ್ಟ ಬಟ್ಟೆಯಲ್ಲಿ ಮನೆ ಬಿಟ್ಟು ಹೊರಟವಳು ಬಂದು ಸೇರಿಕೊಂಡಿದ್ದು ಸೀತಾಲಕ್ಷ್ಮಿಯ ತೌರುಮನೆಗೆ. ಆಗ ಸೀತಾಲಕ್ಷ್ಮಿಯ ತಾಯಿ ಮರುಚಲು ಮಗುವಿನ ಬಸುರಿ. ಕಡಿಮೆ ಕೂಲಿಗೆ ಅಥವಾ ಕೂಲಿಯನ್ನೇ ತೆಗೆದುಕೊಳ್ಳದೆ ಹೊಟ್ಟೆಗಿಷ್ಟು ಅನ್ನ ಹಾಕಿದರೆ ಸಾಕು ಅನ್ನುವಂಥವರು ಎಲ್ಲಿ ಸಿಕ್ಕುತ್ತಾರೆ? ಸಮಯಕ್ಕೆ ಒದಗುತ್ತಾರೆ? ದೇವಕಿ ಈ ಮನೆಯನ್ನೇ ಹುಡುಕಿಕೊಂಡು ಬರಲು ಒಂದು ಕಾರಣ ಇತ್ತು. ಸೀತಾಲಕ್ಷ್ಮಿಯ ಅಮ್ಮ ಮತ್ತು ದೇವಕಿ ಆಸುಪಾಸಿನ ಊರಿನವರು. ತೌರಿನ ಕಡೆಯಿಂದ ದೂರದ ಸಂಬಂಧಿಗಳು. ಹೆಚ್ಚೂಕಮ್ಮಿ ಒಂದೇ ವಯಸ್ಸಿನವರಾದ್ದರಿಂದ ಸ್ನೇಹ, ಸಲಿಗೆಗಳೂ ಇದ್ದುವು.

'ಕಾಲು ಜಾರಿದೆ ಅಕ್ಕಾ. ಹೊಟ್ಟೇಲಿದ್ದಿದ್ದು ಭೂಮಿಗೆ ಬರೋವರೆಗೆ ಒಂತುತ್ತು ಅನ್ನ ಹಾಕಿ, ಸಾಕು. ಆಮೇಲೆ ನನ್ನ ದಾರಿ ನಾನು ಹುಡುಕ್ಕೊಳ್ತೀನಿ. ನಿಮಗೆ ಹೊರೆ ಆಗಲ್ಲ...' ಅಂದಳಂತೆ ದೇವಕಿ. ಮನೆ ಯಜಮಾಂತಿಗೆ ಇಂಥವಳನ್ನು ಮನೆ ಹೊಗಿಸಿಕೊಳ್ಳಬೇಕೋ, ಬೇಡವೋ ಎನ್ನುವ ಇಬ್ಬಂದಿ. ಒಮ್ಮೆ ಕಾಲು ಜಾರಿದವಳಿಗೆ ಜಾರುವುದೇ ಅಭ್ಯಾಸವಾಗಿಬಿಟ್ಟರೆ? ಗಂಡ ಒಳ್ಳೆಯ ಮನುಷ್ಯ ನಿಜ, ಆದರೆ ಪೂರಾ ನಂಬುವುದು ಹೇಗೆ? ತಾನು ಹಡೆದು ಮಲಗಿದಾಗ ಏನಾದರೂ ಎಡವಟ್ಟಾದರೆ? ಮನೆಗೆ ಉಡ ಹೊಕ್ಕಂತಾದರೆ? ಸೀತಾಲಕ್ಷ್ಮಿಯ ಅಮ್ಮನಿಗೆ ಒಂಬತ್ತು ತಿಂಗಳು ತುಂಬುವುದರಲ್ಲಿದೆ. ಎಳೆಬಸುರಿ ದೇವಕಿಗೆ ಮೂರೋ, ನಾಲ್ಕೋ. ಅನಿವಾರ್ಯ ಅಗತ್ಯ ಒಂದು ಕಡೆ. 'ಅಯ್ಯೋ ಪಾಪ' ಎನ್ನುವ ಕನಿಕರ ಮತ್ತೊಂದು ಕಡೆ.

'ಹಡೆದು ಎದ್ದ ಮೇಲೆ ತನ್ನ ದಾರಿ ತಾನು ನೋಡಿಕೊಳ್ಳುತ್ತೇನೆ' ಅಂದಿದ್ದಾಳೆ. ಎಷ್ಟರಮಟ್ಟಿಗೆ ನಂಬಹುದೋ? ತಲೆ ಕೆಟ್ಟು ಮೊಸರಾಗಿತ್ತು ಅನ್ನುತ್ತಿದ್ದಳು ಸೀತಾಲಕ್ಷ್ಮಿಯ ಅಮ್ಮ, ಹಳೆಯದನ್ನು ನೆನೆಸಿಕೊಳ್ಳುವಾಗ. ಅವಳೂ ತನ್ನ ಹಾಗೆ ಒಂದು ಹೆಣ್ಣು. 'ಹೋಗು' ಅನ್ನುವುದು ಸುಲಭ. ಪಾಪಪ್ರಜ್ಞೆ ಅನ್ನುವುದು ಸಾಯುವವರೆಗೆ ಕಾಡಿಬಿಡುತ್ತದೆ. 'ಏನ್ಮಾಡೋದ್ರೀ? ಏನ್ಮಾಡೋದ್ರೀ?' ಎಂದು ಉರು ಹಾಕಿದಳಂತೆ ಅಮ್ಮ. 'ತೀರ್ಮಾನ ನಿಂಗೆ ಬಿಟ್ಟಿದ್ದು' ಅಂದನಂತೆ ಅಪ್ಪ. 'ಎರಡನೇ ಹೆಂಡತಿ ಕಿವಿ ಕಚ್ಚಿದ್ರೂ ನಚ್ಚಗೆ' ಎನ್ನುವ ಗಾದೆ ಉಂಟು. ಅಪ್ಪ ಅಮ್ಮ ಹಾಕಿದ ಗೆರೆ ದಾಟುತ್ತಿರಲಿಲ್ಲ. ಅಮ್ಮ ಅದರ ದುರುಪಯೋಗ ಮಾಡಿಕೊಂಡಿರಲಿಲ್ಲ. ದೇವಕಿಗೆ ಆ ಮನೆಯ ಅನ್ನದ ಋಣ, ನೀರಿನ ಋಣ ಇತ್ತು. ಅಮ್ಮನ ಬಾಣಂತನವನ್ನು ಅವಳು ನಿಸ್ಪೃಹತೆಯಿಂದ ಮಾಡಿದಳು. ಮತ್ತು ಅಮ್ಮ ಅವಳ ಬಾಣಂತನ. ಸಮುದಾಯದ ಕಟ್ಟುಪಾಡಿನಂತೆ ದೇವಕಿ ಜಾತಿಯಿಂದ ಹೊರಗೆ. ಆ ಜಾತಿಗೊಂದು ಪ್ರತ್ಯೇಕ ಹೆಸರು. ಎಲ್ಲರ ಜೊತೆ ಪಂಕ್ತಿಯಲ್ಲಿ ಊಟಕ್ಕೆ ಕೂರುವ ಸವಲತ್ತು ಇಲ್ಲ. ಅಡ್ಡಪಂಕ್ತಿ. ಅಡುಗೆಮನೆ, ದೇವರ ಮನೆಗಳಿಗೆ ಪ್ರವೇಶ ಇಲ್ಲ. ಹೊರಹೊರಗೇ. ಸೀತಾಲಕ್ಷ್ಮಿಯ ಅಮ್ಮನಿಗೆ ಹೆಣ್ಣು ಮಗು. ಮುಂದೆ ದೇವಕಿಗೆ ಗಂಡು ಮಗು. ತೀರಾ ಅಪರೂಪವಾದರೂ ದೇವಕಿಯಂಥವರು ಸಮಾಜದಲ್ಲಿ ಇದ್ದೇ ಇದ್ದರು. ಮೈ ನೆರೆಯುವ ಮೊದಲೇ ಗಂಡನನ್ನು ಕಳೆದುಕೊಂಡು ಮನೆಯವರು ಯಾಕೆ ಅಳುತ್ತಿದ್ದಾರೆಂಬ ಅರಿವೂ ಇಲ್ಲದೆ ದೊಡ್ಡವರಾಗುತ್ತಿದ್ದ ಹುಡುಗಿಯರಿರುತ್ತಿದ್ದರು. ತೌರುಮನೆಯಲ್ಲೋ, ಗಂಡನ ಮನೆಯಲ್ಲೋ ಎಲ್ಲರ ಚಾಕರಿ ಮಾಡುವಷ್ಟಕ್ಕೆ ಸೀಮಿತರಾಗಿಬಿಡುತ್ತಿದ್ದರು. ತಾಯ್ತನದ ಅನುಭವವಿಲ್ಲದೆ ಡಜನ್ನುಗಟ್ಟಲೆ ಮಕ್ಕಳನ್ನು ಸಾಕಿಕೊಡುತ್ತಿದ್ದರು. ಬಾಣಂತನದಲ್ಲಿ, ಬಾಲೆ ಆರೈಕೆಯಲ್ಲಿ ಪಾರಂಗತರಾಗುತ್ತಿದ್ದರು. ದೇವಕಿಯಂತೆ ಎಲ್ಲೋ ಕೆಲವರು ಪ್ರಾಯಸಹಜ ಸೆಳೆತಕ್ಕೆ ಒಳಗಾಗುವುದು, ಮಕ್ಕಳನ್ನು ಹೆರುವುದು ಲೋಕದ ಕಣ್ಣಲ್ಲಿ ಅಪರಾಧವಾದರೂ, ಹುಟ್ಟುಜಾತಿಯಿಂದ ಅವರನ್ನು ಹೊರ ಹಾಕಿದರೂ ಅಂಥವರು ತಮ್ಮ ಹೊಸ ಜಾತಿಯ ಪರಿಧಿಯಲ್ಲೇ ಸಂಬಂಧ ಬೆಳೆಸಿಕೊಂಡು ಸಂಸಾರವಂದಿಗರಾಗುತ್ತಿದ್ದರು. ಇಂಥವರಲ್ಲಿ ತಲೆಗೂದಲು ತೆಗೆಸಿಕೊಂಡವರು, ಸಕೇಶಿಗಳು ಎನ್ನುವ ಭೇದವೇನಿರುತ್ತಿರಲಿಲ್ಲ. ಪ್ರಾಯ ಪ್ರಾಯವೇ. ದೇವಕಿಗೆ ತಲೆಗೂದಲು ತೆಗೆಸಿಕೊಳ್ಳಬೇಕೆಂಬ ಒತ್ತಡ ಬರಲಿಲ್ಲ ಅನ್ನುವುದಕ್ಕೆ ಸಕಾರಣವಿಲ್ಲದಿದ್ದರೂ ಎಂದಾದರೊಂದು ದಿನ ತನ್ನ ತೆಕ್ಕೆಗೊದಗುತ್ತಾಳೆಂಬ ಆಸೆ ಇಟ್ಟುಕೊಂಡಿರಬಹುದಾಗಿದ್ದ ಬಾವ ಈ ವಿಷಯದಲ್ಲಿ ತಲೆ ಹಾಕಲು ಬಂದಿರಲಿಕ್ಕಿಲ್ಲ ಅನ್ನುತ್ತಾಳೆ ದೇವಕಿ. ಸೀತಾಲಕ್ಷ್ಮಿಯ ಅಮ್ಮ ದೇವಕಿಯ ನಡುವೆ ಇದ್ದ ಬಾಂಧವ್ಯದಿಂದ ಈ ಗುಟ್ಟುಗಳು ಅಮ್ಮನಿಗೆ ರವಾನೆಯಾಗಿ, ಆಗೀಗ, ಅಷ್ಟಿಷ್ಟು, ಸೀತಾಲಕ್ಷ್ಮಿಯ ಕಿವಿ ತಲುಪಿ, ದೊಡ್ಡವಳಾದ ಮೇಲೆ ಅದರ ಅರ್ಥ ಗೊತ್ತಾಗಿ, ಅವಳಿಗೆ ಅಂಥವರ ಬಗ್ಗೆ ಏನೋ ಕನಿಕರ. ಮೃದುಭಾವನೆ.

ದೇವಕಿ ಹೇಳಿದಂತೆ ನಡೆದುಕೊಂಡಳು. ತಿಂಗಳೆರಡು ತುಂಬುತ್ತಿದ್ದಂತೆ ತನಗೆ ಆಶ್ರಯ